


‘ನಾನು ಐದಾರನೇ ವಯಸ್ಸಿನಲ್ಲಿಯೇ ಇಂತಹ ಹಾಡುಗಳನ್ನು ಕೇಳುತ್ತಿದ್ದೆ. ನಸ್ರತ್ ಫತೇ ಅಲಿ ಖಾನ್, ಭೀಮಸೇನ ಜೋಷಿ ತರಹದವರ ಸಂಗೀತದ ಪ್ರಭಾವವನ್ನು ನಾವು ಮೊದಲಿನಿಂದಲೂ ಗುರುತಿಸುತ್ತೇವೆ. ಅದಷ್ಟೆ ಅಲ್ಲದೆ ಇಂತಹ ಪಾಶ್ಚಾತ್ಯ ಸಂಗೀತವೂ ಹಾಡುಗಳನ್ನು ಇಷ್ಟಪಡುವ ಹರೆಯದವರ ಮೇಲೆ ಪ್ರಭಾವ ಬೀರುತ್ತದೆ. ಈಗ 30 ಸೆಕೆಂಡ್, ಒಂದು ನಿಮಿಷದಲ್ಲಿ ಕೇಳಿದ ಸಂಗೀತವನ್ನು ಮರುಸೃಷ್ಟಿಸಿ ರೀಲ್‌ಗಳನ್ನು ಮಾಡುತ್ತಿದ್ದಾರೆ. ಮೊದಲ ಕೆಲವು ಸೆಕೆಂಡುಗಳು ಹಾಡು ಹಿಡಿದಿಡಬಲ್ಲದು ಎಂದಾದರೆ ಅದು ಸುಲಭವಾಗಿ ಜನಪ್ರಿಯವಾಗಿಬಿಡುತ್ತದೆ. ಅದಕ್ಕೆ ಯಾವುದೇ ತರ್ಕ ಇರಬೇಕು ಎಂದೇನೂ ಇಲ್ಲ’ ಎಂದು ಸಂಚಿತ್ ಮಾತಿಗೆ ತೆರೆದುಕೊಂಡರು.

‘ಈಗ ಹಿಪ್‌ಹಾಪ್ ಹೆಚ್ಚು ಜನಪ್ರಿಯ. ಪಬ್‌ಗಳಲ್ಲಿ ಅದನ್ನು ಹೆಚ್ಚು ಕೇಳಿಸುತ್ತಾರೆ. ಬಿಟಿಎಸ್ ತರಹದ ಬ್ಯಾಂಡ್‌ಗಳ ಹಾಡುಗಳು ಜನಪ್ರಿಯವಾಗುವುದು ಕಾಲಮಾನದ ಸಹಜ ಕ್ರಿಯೆ ಎಂದೇ ನನ್ನ ಭಾವನೆ. ಹಾಗೆ ನೋಡಿದರೆ ಹತ್ತು ಹನ್ನೆರಡು ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಈಗ ಬ್ಯಾಂಡ್‌ಗಳು ಕಡಿಮೆ. ನಾನು ಆಗ ಸ್ಥಳೀಯ ಬ್ಯಾಂಡ್‌ಗಳು ಹುಟ್ಟಿ, ಅವು ಸಂಗೀತ ರೂಪಿಸುತ್ತಿದ್ದುದನ್ನು ನೋಡಿ ಸಂತೋಷಪಟ್ಟಿದ್ದವನು. ಐದಾರು ವರ್ಷಗಳಿಂದ ಬ್ಯಾಂಡ್ ಕಟ್ಟಿ, ಸಂಗೀತ ಸೃಷ್ಟಿಸುವ ವಿದ್ಯಮಾನ ಕಡಿಮೆಯಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಯಾರಾದರೂ ಜನಪ್ರಿಯ ಸಂಗೀತ ನೀಡಬಲ್ಲರು ಎನ್ನುವುದು ಸ್ಪಷ್ಟವಾದರೆ, ಸಂಗೀತ ಮಾಡಲು ನಿರ್ಮಾಪಕರು ತಂತಾವೇ ಮುಂದೆ ಬರುವ ಕಾಲ ಇದಾಗಿದೆ. ಬ್ಯಾಂಡ್ ಕಟ್ಟದೆಯೂ ಇರುವ ಅವಕಾಶದಲ್ಲೇ ಹೊಸತನ್ನು ತೋರುವ ಜಾಣ–ಜಾಣೆಯರಿಗೆ ಇದು ಒಳ್ಳೆಯ ಕಾಲ. ಒಳ್ಳೆಯ ಸೌಂಡ್ ಎಲ್ಲಿ ಕೇಳಿದರೂ ನನ್ನಂಥವರ ಕಿವಿ ತಂತಾನೇ ಅರಳುವುದು. ಹಾಗೆಯೇ ನನ್ನ ಜಮಾನಾದವರದ್ದು’ ಎನ್ನುವುದು ಸಂಚಿತ್ ವಿಶ್ಲೇಷಣೆ.

ಹಲವು ಬಗೆಯ ಸಂಗೀತ ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಾ, ಆಸಕ್ತಿಕರ ‘ಕೊಲಾಬೊರೇಷನ್’ಗಳಿಗೂ ಸೈ ಎಂದಿರುವ ಗಾಯಕಿ ವಾರಿಜಾಶ್ರೀ ಪಾಶ್ಚಾತ್ಯ ಸಂಗೀತದ ಹದಿಹರೆಯದವರ ಹುಚ್ಚುಪ್ರೇಮವನ್ನು ಬೇರೆಯದೇ ರೀತಿ ವ್ಯಾಖ್ಯಾನಿಸುತ್ತಾರೆ.

‘ಒಂದು ಸಂಗೀತದ ಪ್ರಭಾವ ಇನ್ನೊಂದು ಪ್ರದೇಶದ ಮೇಲೆ ಇರುವುದನ್ನು ಎಲ್ಲ ಕಾಲದಲ್ಲೂ ನೋಡಬಹುದು. ಇದಕ್ಕೆ ಹಲವು ತರ್ಕಗಳನ್ನೂ ಮುಂದಿಡಬಹುದು. ನಾವು ತ್ಯಾಗರಾಜರು, ಮುತ್ತುರಾಜ ದೀಕ್ಷಿತರು ಕರ್ನಾಟಕ ಸಂಗೀತಕ್ಕೆ ನೀಡಿದ ಕಾಣ್ಕೆಗಳ ಬಗೆಗೆ ಮಾತಾಡುತ್ತೇವೆ. ಪಾಶ್ಚಾತ್ಯ ಸಂಗೀತದಲ್ಲೂ ಶೂಬರ್ಟ್ ಅವರಂಥವರು ಈ ನಿಟ್ಟಿನಲ್ಲಿ ನೆನಪಾಗುತ್ತಾರೆ. ಕರ್ನಾಟಕ ಸಂಗೀತ ಎಂದರೆ ಅಸಂಖ್ಯ ರಾಗಗಳು, ಕೃತಿಗಳು. ಹಿಂದೂಸ್ತಾನಿ ಸಂಗೀತ ಎಂದರೆ ಒಂದೇ ರಾಗದಲ್ಲಿ ಇಳಿಯುವ ವರಸೆ. ಸಿನಿಮಾ ಹಾಡೆಂದರೆ ಇವನ್ನೇ ಆಧಾರವಾಗಿಟ್ಟುಕೊಂಡು ತಿಳಿಮಾಡಿ ಕೇಳಿಸುವ ವ್ಯವಸ್ಥೆ. ಯಾವುದೇ ಸಂಗೀತವನ್ನು ನಾವು ವ್ಯಾಖ್ಯಾನಿಸಲು ಹೊರಟಾಗ ಬೇರಿಗೇ ಇಳಿಯಬೇಕು. ಅಲ್ಲೆಲ್ಲ ಅವುಗಳ ಶಾಸ್ತ್ರೀಯತೆಯ ಅರಿವು ನಮಗೆ ಆಗುತ್ತದೆ.

‘ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಯೂಟ್ಯೂಬ್ ಇರಲಿಲ್ಲ. ಕ್ಯಾಸೆಟ್, ಸೀಡಿ ನೆಚ್ಚಿಕೊಂಡಿದ್ದೆ. ಈಗಿನ ಮಕ್ಕಳಿಗೆ ಎಲ್ಲ ಸಂಗೀತವೂ ಯೂಟ್ಯೂಬ್ ಮೂಲಕ ಸಿಗುತ್ತಿದೆ. ಒಮ್ಮೆ ಅದು ನಮ್ಮ ರುಚಿ, ಆಯ್ಕೆಯನ್ನು ಹಿಡಿದರೆ, ಒಂದಾದಮೇಲೆ ಒಂದರಂತೆ ಹಾಡುಗಳನ್ನು ಒಡ್ಡುತ್ತಾ ಹೋಗುತ್ತದೆ. ಬಹುಶಃ ಆ ಕಾರಣದಿಂದಲೇ ಈಗ ಕೆ–ಪಾಪ್ ಹೆಚ್ಚು ಜನರಿಗೆ ಇಷ್ಟವಾಗುತ್ತಿರಬಹುದು’.

‘ಮುತ್ತುಸ್ವಾಮಿ ದೀಕ್ಷಿತರು ಹಾಗೂ ಬಾಲುಸ್ವಾಮಿ ದೀಕ್ಷಿತರ ಕುರಿತು ಕರ್ನಾಟಕ ಸಂಗೀತದಲ್ಲಿ ನಾವು ಮಾತನಾಡುತ್ತಿರುತ್ತೇವೆ. ಬಾಲುಸ್ವಾಮಿ ದೀಕ್ಷಿತರು ಇಂಗ್ಲಿಷ್ ಬ್ಯಾಂಡ್ ಒಂದರ ಪ್ರದರ್ಶನ ನೋಡಿ **Notes to Swara** ಎಂಬ ಸರಣಿ ಸಂಗೀತವನ್ನೇ ಸಿದ್ಧಪಡಿಸಿದ್ದರಂತೆ. ಆ ಕಾಲದಿಂದಲೇ ಒಂದು ಸಂಗೀತದ ಮೇಲೆ ಇನ್ನೊಂದರ ಪ್ರಭಾವ ಇತ್ತೆಂದ ಮೇಲೆ ಈಗ ಇಲ್ಲದೇ ಇರುವುದೇ? ಪಂಡಿತ್ ರವಿಶಂಕರ್ ಅವರು ಸಿತಾರ್ ಮೂಲಕ ನಮ್ಮ ಸಂಗೀತವನ್ನು ಬೇರೆ ದೇಶಗಳಿಗೆಲ್ಲ ತಲುಪಿಸಿದರು. ‘ಬೀಟೆಲ್ಸ್’ ಎಂಬ ಜನಪ್ರಿಯ ಬ್ಯಾಂಡ್ ಜತೆಗೆ ಅವರು ಕೊಲಾಬೊರೇಟ್ ಆದದ್ದನ್ನು ನೋಡಿದ್ದೇವೆ. ಸಂಗೀತದಲ್ಲಿ ಇಂತಹ ಕೊಡು–ಕೊಡುಗೆಗಳು ಇದ್ದೇ ಇರುತ್ತವೆ’ ಎಂದು ವಾರಿಜಾಶ್ರೀ ತಮ್ಮ ಸಂಗೀತ ಜ್ಞಾನವನ್ನು ಹಂಚಿಕೊಂಡರು.

ಸಂಗೀತದ ಇಂತಹ ಪರಿಣಾಮಗಳು ಕಾಲಾತೀತ. ಲಭ್ಯ ಸಂಪರ್ಕ ಸಾಧನಗಳಿಗೆ ತಕ್ಕಂತೆ ಅವುಗಳ ಬೀಸೂ ಇರುತ್ತವೆ ಎನ್ನುವುದಂತೂ ಸ್ಪಷ್ಟ. ದೆಹಲಿಯಲ್ಲಿ ಮಿಲಿಟರಿ ಕ್ಯಾಂಟೀನ್‌ಗಳಲ್ಲಿ ಕೇಳುತ್ತಿದ್ದ ಪಾಶ್ಚಾತ್ಯ ರಾಗಗಳ ಗುಂಗು ಹತ್ತಿಸಿಕೊಂಡು 1970ರ ದಶಕದಲ್ಲೇ ಡಿಜೆ ಆಗಿ, ಸಿ.ಡಿಗಳ ಮೂಲಕ ಹಾಡು ಕೇಳಿಸಿದವರಿದ್ದಾರೆ. 1990ರ ದಶಕದಲ್ಲಿ ಎಂಟಿವಿ ಬಂದಮೇಲೆ ಅದರಲ್ಲಿನ ಪಾಶ್ಚಾತ್ಯಗೀತೆಗಳನ್ನು ಕೇಳಿ ಸುಖಿಸಿದವರೂ ಇದ್ದಾರೆ. ಅವರೆಲ್ಲ ಈಗ ತಮ್ಮ ಮೊಮ್ಮಕ್ಕಳು, ಮಕ್ಕಳು ಕೆ–ಪಾಪ್ ಗುಂಗಿಗೆ ಬಿದ್ದಿರುವುದನ್ನು ಸಹಜ ವಿದ್ಯಮಾನ ಎನ್ನುವಂತೆಯೇ ನೋಡುತ್ತಿರುವರೋ ಏನೋ?

**ಪ್ರತಿಕ್ರಿಯಿಸಿ: feedback@sudha.co.in**